ಶ್ರೀ ಹೆಚ್.ಕೆ. ಪಾಟೀಲ್. ನೀವು ಬರೆದುಕೊಟ್ಟರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಸರ್ವಜ್ಞನ ಜನ್ಮಸ್ಥಳ ಅಬಲೂರು ಹಾಗೂ ಮದಗ ಮಾನೂರ ಪ್ರೇಕ್ಷಣೆಯ ಸ್ಥಳಗಳ ಅಭಿವೃದ್ಧಿ.

273; ಶ್ರೀ ಬಣಕಾರ್ ಯು.ಬಿ (ಹಿರೇಕೆರೂರು) ಮಾನ್ಯ ವಿಧಾನಸಭಾ ಸದಸ್ಯರು

ಅ) ಹಿರೇಕೆರೂರು ತಾಲ್ಲೂಕಿನ ಸರ್ವಜ್ಞನ ಸ್ಥಳ ಅಬಲೂರ ಹಾಗೂ ಪ್ರಸಿದ್ಧ ಮದಗ ಮಾಸೂರ ಪ್ರೇಕ್ಷಣೀಯ ಸ್ಥಳಗಳ ಅಭಿವೃದ್ಧಿಗೆ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳು ಯಾವುವು (ವಿವರ ನೀಡುವುದು)?

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು)

ಅ) ಸರ್ವಜ್ಞನ ಜನ್ಮಸ್ಥಳವಾದ ಅಬಲೂರಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ₹ 50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಸರ್ವಜ್ಞನ ಸ್ಮಾರಕ ಭವನ ನಿರ್ಮಿಸಲಾಗಿದೆ.

ಅಬಲೂರಿನ ಪ್ರವೇಶ ದ್ವಾರದ ಬಳಿ ಐ.ಬಿ. ವೃತ್ತದಲ್ಲಿ ಸರ್ವಜ್ಞನ ಮೂರ್ತಿಯನ್ನು ಸ್ಥಾಪಿಸಲಾಗಿದೆ

ಮದಗ ಮಾಸೂರಲ್ಲಿ ಅರಣ್ಯ ಇಲಾಖೆಯು 2008-09 ನೇ ಸಾಲಿನಲ್ಲಿ ₹ 10 00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಉದ್ಯಾನವನ, ಕುಳಿತುಕೊಳ್ಳಲು ಆಸನಗಳು, ಪೆನ್ಸಿಂಗ್ ಮುಂತಾದ ಸೌಲಭ್ಯಗಳನ್ನು ನಿರ್ಮಿಸಿ ಪೂರ್ಣಗೊಳಿಸಿರುತ್ತದೆ.

ಶ್ರೀ ಯು ಬಿ ಬಣಕಾರ್: ಮಾನ್ಯ ಅಧ್ಯಕ್ಷರೆ, ಸರ್ವಜ್ಞನ ಜನ್ಮಸ್ಥಳವಾದ ಅಬಲೂರಿನಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಸರ್ವಜ್ಞನ ಅಧ್ಯಯನ ಪೀಠವನ್ನು ಪ್ರಾರಂಭ ಮಾಡುವುದಕ್ಕೋಸ್ಕರ ಹಾಗೂ ಜನ್ಮಸ್ಥಳ ಅಬಲೂರಿನಲ್ಲಿ ಎಲ್ಲಾ ರಸ್ತೆಗಳನ್ನು ಸರ್ವ ರಸ್ತೆಗಳನ್ನಾಗಿ ಅಭಿವೃದ್ಧಿ ಮಾಡುವುದಕ್ಕೆ, ಸರ್ವಜ್ಞ ವಚನಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಣೆ ಮಾಡಿ, ಎಲ್ಲಾ ಶಾಲಾ ಮಕ್ಕಳಿಗೆ ಒದಗಿಸುವ ಬಗ್ಗೆ ಹಾಗೂ ಮದಗ ಮಾಸೂರಿನಲ್ಲಿ

ಒಂದು ಯಾತ್ರಿ ನಿವಾಸ ಹಾಗೂ ಅಲ್ಲಿ ದಿನನಿತ್ಯ ಸಹಸ್ರಾರು ಪ್ರವಾಸಿಗರು ಬರುವುದರಿಂದ ಅದನ್ನು ಅಭಿವೃದ್ಧಿ ಮಾಡಬೇಕೆಂದು ಮಾನ್ಯ ಸಚಿವರ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ

ಶ್ರೀ ಆರ್.ವಿ ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ನಮ್ಮ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕೆಲವು ಕಾರ್ಯಕ್ರಮ ಹಮ್ಮಿಕೊಂಡಿದ್ದು, ಈಗಾಗಲೇ ಜಾರಿಗೆ ಬಂದಿದೆ. ಗೌರವಾನ್ವಿತ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಹೇಳಿರುವಂತಹ ಯಾತ್ರಿ ನಿವಾಸ, ಅಧ್ಯಯನ ಪೀಠ ಮಾಡುವುದರ ಬಗ್ಗೆ ಪರಿಶೀಲನೆ ಮಾಡಿ, ಖಂಡಿತವಾಗಿ ಸರ್ಕಾರ ಆದಷ್ಟು ಬೇಗ ಈ ಒಂದು ಕೇಂದ್ರ ಪ್ರವಾಸ ತಾಣವನ್ನು ಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಬಹು ಹಳ್ಳಿಗಳ ಕುಡಿಯುವ ನೀರಿನ ಯೋಜನೆ

611; ಡಾ॥ ಅಜಯಸಿಂಗ್ (ಜೇವರ್ಗಿ)

ಅ) ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಹಲವಾರು ಗ್ರಾಮಗಳು ತೀವ್ರ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಹುಹಳ್ಳಿಗಳ ಕುಡಿಯವ (Multı Vıllage Drınkıng water Scheme) ನೀರಿನ ಯೋಜನೆ ಮಂಜೂರಾತಿಗಾಗಿ ಅನುಸರಿಸಬೇಕಾದ ಮಾನದಂಡ ಏನು;

ಇ) ಜೇವರ್ಗಿ ವಿಧಾನಸಭಾ ಕ್ಷೇತ್ರದ ಯಾವ ಯಾವ ಗ್ರಾಮಗಳಿಗೆ ಈ ಯೋಜನೆಗಳು ಮಂಜೂರಾಗಿದೆ;

ಈ) ಈ ಪೈಕಿ ಯಾವ ಕಾಮಗಾರಿಗಳು ಪ್ರಗತಿ ಹಂತದಲ್ಲಿವೆ; ಈ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಹೆಚ್.ಕೆ ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)